## ಮೃತ್ಯುಲೀಲೆ

ಮೀನು, ಜಿರಳೆ ಇತ್ಯಾದಿ ಸಜಾತಿಭಕ್ಷಕ ಪ್ರಾಣಿಗಳ ಬಗ್ಗೆ ಕೇಳಿದ್ದೀರಿ. ಬಕಾಸುರ, ಹಿಡಿಂಬ ಇತ್ಯಾದಿ ನರಭಕ್ಷಕರೂ ನಮ್ಮ ಪುರಾಣಗಳಲ್ಲಿ ಪ್ರಸಿದ್ಧ. ಇದೇ ರೀತಿಯಲ್ಲಿ ದೊಡ್ಡ ದೊಡ್ಡ ಆಕಾಶಗಂಗೆಗಳೂ ತಮ್ಮ ಹತ್ತಿರ ಸುಳಿಯುವ ಚಿಕ್ಕ ಆಕಾಶಗಂಗೆಗಳನ್ನು ಕಬಳಿಸುತ್ತವೆ ಎಂದು ವಿಜ್ಞಾನಿಗಳು ಶಂಕಿಸಿದ್ದರು. ಆದರೆ, ಇತ್ತೀಚೆಗಷ್ಟೇ ಇದಕ್ಕೆ ಪುರಾವೆ ದೊರೆತಿದೆ. ಅತಿಸೂಕ್ಷ್ಮ ಕಿರಣಗಳನ್ನು ಗ್ರಹಿಸಬಲ್ಲ ಹಬಲ್ ದೂರದರ್ಶಕ ಹಾಗೂ ಹವಾಯ್ ದ್ವೀಪದಲ್ಲಿರುವ ಕೆಕ್ ದುರ್ಬೀನುಗಳ ಸಹಾಯದಿಂದ ಈಗ ಈ ಪ್ರಕ್ರಿಯೆಯ ಚಿತ್ರವನ್ನು ವಿಜ್ಞಾನಿಗಳು ಸೆರೆಹಿಡಿದಿದ್ದಾರೆ. ಭೂಮಂಡಲದಿಂದ ಎರಡು ಶತಕೋಟಿ ಜ್ಯೋತಿರ್ವರ್ಷಗಳಷ್ಟು ದೂರವಿರುವ ಒಂದು ಬೃಹತ್ ಆಕಾಶಗಂಗೆಯು ತನ್ನ ಅಪಾರವಾದ ಗುರುತ್ವಾಕರ್ಷಣೆಯಿಂದ ಸಣ್ಣ ಆಕಾಶಗಂಗೆಯನ್ನು ಸೆಳೆಯುತ್ತಿರುವ ದೃಶ್ಯ ಈಗ ವಿಸ್ಮಯ ಮೂಡಿಸುತ್ತಿದೆ. ಆದರೆ ಈ ಕ್ರಿಯೆಗೆ ಕೆಲವು ಶತಕೋಟಿ ವರ್ಷಗಳೇ ಬೇಕಾಗುವುದಂತೆ.

ನಮಗೆ ಜೀವದಾನ ಮಾಡುತ್ತಿರುವ ಸೂರ್ಯನೂ ನಮ್ಮನ್ನೆಲ್ಲ ಒಂದುದಿನ, ಈ ಭೂಮಿಯೊಂದಿಗೆ, ಕಬಳಿಸುವವನಿದ್ದಾನೆ. ಹೀಗೆ ಮೃತ್ಯುಲೀಲೆ ಎಲ್ಲೆಲ್ಲಿಯೂ ನಡೆಯುತ್ತಿದೆ. ಈ ಕಬಳಿಕೆ ಮುಂದುವರಿದು ಮಹಾಕಾರಣದಲ್ಲಿ ಎಲ್ಲವೂ ಸೇರಿಕೊಳ್ಳುತ್ತವೆ. ಮತ್ತೆ ಸೃಷ್ಟಿ ಪ್ರಾರಂಭವಾಗುತ್ತದೆ. ಹೀಗೆ ಸೃಷ್ಟಿ-ಸ್ಥಿತಿ-ಪ್ರಳಯ ಮುಂದುವರಿಯುತ್ತದೆ. ಇದೇ ವಿಶ್ವನಿಯಮ. ವಿನಾಶವೂ ಒಂದು ಸೃಷ್ಟಿ ನಿಯಮ. ವಿನಾಶವಿಲ್ಲದೆ ವಿಕಾಸವಿಲ್ಲ. ಮೃತ್ಯುವಿಲ್ಲದೆ ಜೀವನವಿಲ್ಲ. ನಿರಂತರ ಜೀವಕೋಶಗಳು ಸಾಯುತ್ತ, ಹೊಸಜೀವಕೋಶಗಳು ಹುಟ್ಟುತ್ತಿರುವುದನ್ನೇ ನಾವು ಜೀವನವೆನ್ನುವುದು. ಜೀವನ-ಮರಣಗಳೆರಡನ್ನೂ ನಾವು ಸ್ವೀಕರಿಸಬೇಕು. ಸ್ವಾಮಿ ವಿವೇಕಾನಂದರು 'ತಾಯಿ ಕಾಳಿ' ಎಂಬ ತಮ್ಮ ಕವನದಲ್ಲಿ ಹೇಳುತ್ತಾರೆ :

**ಅಳಲುಗಳನು ಪ್ರೀತಿಸಿ,**
**ಮೃತ್ಯುವನಾಲಂಗಿಸಿ,**
**ಪ್ರಳಯನಾಟ್ಯಗೈವ ಧೀರ-**
**ನೆಡೆಗೆ ತಾಯಿ ಬರುವಳು.**

(ಅನುವಾದ : ಎಚ್.ಎನ್. ಮುರಳೀಧರ)

ಅನಂತ ವಿಶ್ವದ ವಿಚಿತ್ರ ನಿಯಮಗಳನ್ನೂ ಕಾರ್ಯ ವೈಖರಿಯನ್ನೂ ತಿಳಿಯಲು ಪ್ರಯತ್ನಿಸುತ್ತಿರುವ ಈ ಮಾನವನ ತೀಕ್ಷ್ಣ ಬುದ್ಧಿಯನ್ನು ಮೆಚ್ಚಬೇಕಲ್ಲವೇ? ಜಗತ್ತಿನ ವೈಶಾಲ್ಯಕ್ಕೆ ಹೋಲಿಸಿದರೆ ಮಾನವನು ಒಂದು ಧೂಳಿನ ಕಣಕ್ಕಿಂತಲೂ ಕಿರಿದಾದವನು. ಆದರೂ ಅವನ ಬುದ್ಧಿಯ ಹಿರಿಮೆಗೆ ಇತಿಮಿತಿಯಿಲ್ಲ. ಅವನು ತನ್ನ ಬುದ್ಧಿಯ ಸಣ್ಣ ಬಿಂದುವಿನಲ್ಲಿ ವಿಶ್ವಸಿಂಧುವನ್ನು ಕಾಣಲು ಪ್ರಯತ್ನಿಸುತ್ತಾನೆ. ◆

## ನಗರದ ನರಪಶು

ಆಧುನಿಕ ಸಮಾಜದ ಪ್ರತೀಕ, ನಾಗರಿಕತೆಯ ಪರಾಕಾಷ್ಠೆಯ ಪ್ರತಿನಿಧಿ, ಫ್ಯಾಶನ್ ಸಾಮ್ರಾಜ್ಯದ ರಾಜಧಾನಿಯೆಂದೇ ಪ್ರಸಿದ್ಧವಾದ ಪ್ಯಾರಿಸ್ ನಗರದಲ್ಲಿ ನಡೆದ ಅಮಾನವೀಯ ಪಶುಸದೃಶ ಘಟನೆಯೊಂದು ಅಲ್ಲಿಯ ಸಾಮಾಜಿಕ ಚಿಂತಕರನ್ನು ತಲ್ಲಣಗೊಳಿಸಿದೆ. ಪ್ರಸಿದ್ಧ ಸಿನಿಮಾತಾರೆ ಹಾಗೂ ಮಹಿಳಾಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದ ಮೇರೀ ಟ್ರಿಂಟಿಗ್ನೆಂಟ್ ಪತಿಯ ತೀವ್ರ ಹೊಡೆತದಿಂದ ಸಾವನ್ನಪ್ಪಿದ್ದಾಳೆ. ಆಕೆಯ ಪತಿಯೇನೂ ಸಾಮಾನ್ಯನಲ್ಲ, ಆತ ಪ್ರಸಿದ್ಧ ಗಾಯಕ! ಇರಾಕ್‌ನಲ್ಲಿ ನಡೆದ ಯುದ್ಧದ ವಿರುದ್ಧ ಪ್ರತಿಭಟನೆ ನಡೆಸಿದ ಈ ಪತಿರಾಯ ತನ್ನ ಪತ್ನಿಯ ಸಾವಿಗೆ ಕಾರಣನಾದುದು ಅಪಹಾಸ್ಯವಲ್ಲವೇ?

ಇದು ಅಲ್ಲಿಯ ಸಮಾಜದ ದೊಡ್ಡ ಸಮಸ್ಯೆ. ಪ್ರತಿ ಹತ್ತು ಮಹಿಳೆಗೆ ಒಬ್ಬಳಂತೆ ಪತಿಯಿಂದ ದೈಹಿಕ ಯಾತನೆಗೊಳಗಾಗುವುದು ಅಲ್ಲಿ ಸಾಮಾನ್ಯವಂತೆ! ಐದು ದಿನಗಳಿಗೊಮ್ಮೆ ಒಬ್ಬ ಮಹಿಳೆ ಈ ಪಿಡುಗಿನಿಂದ ಸಾವಿಗೀಡಾಗುತ್ತಾಳೆ! ೧.೫ ದಶಲಕ್ಷ ಮಹಿಳೆಯರು ತಮ್ಮ ಪುರುಷರಿಂದ ನಾನಾರೀತಿಯ ಕಿರುಕುಳವನ್ನು ಅನುಭವಿಸುತ್ತಿದ್ದಾರಂತೆ! ಇದಕ್ಕೆಲ್ಲ ಮೂಲಕಾರಣ ಅಸೂಯೆ ಹಾಗೂ ಪತ್ನಿಯ ಸ್ವಾತಂತ್ರ್ಯಕ್ಕೆ ತಡೆಯೊಡ್ಡುವುದರಿಂದ ಪಡುವ ವಿಲಕ್ಷಣ ಸುಖ. ಎಲ್ಲ ಸೌಕರ್ಯಗಳಿದ್ದೂ, ಧನದಲ್ಲಿ ಓಲಾಡುವವರಲ್ಲೂ ಈ ನಡವಳಿಕೆ ಕಂಡುಬರುತ್ತಿರುವುದಕ್ಕೆ ಇದೇ ಕಾರಣ ಎಂದು ಸಮಾಜತಜ್ಞರು ಹೇಳಿದ್ದಾರೆ.

ವಿಲಾಸಮಯ ಜೀವನ, ವೇಷಭೂಷಣಗಳ ಬಳಕೆ ಹಾಗೂ ಕೀರ್ತಿಯ ಅಭಿಲಾಷೆಯಿಂದ ದೊಡ್ಡ ಸಭೆಗಳಲ್ಲಿ ಕಾಣಿಸಿಕೊಳ್ಳುವುದು—ಇವು ತೋರಿಕೆಯ ಜೀವನವಷ್ಟೇ. ಒಳಗಿನ ಪಶುಸದೃಶ ಅಮಾನವೀಯ ಗುಣಗಳನ್ನು ಸಂಸ್ಕರಿಸಿ ಪ್ರೀತಿವಿಶ್ವಾಸಗಳನ್ನು ರೂಢಿಸಿಕೊಳ್ಳದಿದ್ದರೆ, ಸಮಾಜದಲ್ಲಿನ ನೀತಿ, ನಿಯಮ, ಕಾನೂನುಗಳು ಏನನ್ನು ತಾನೇ ಮಾಡಬಲ್ಲವು? ಮಾನವ ಬದಲಾಗಬೇಕು. ಸ್ತ್ರೀ ಕೇವಲ ಸುಖಸೌಂದರ್ಯಗಳ ವಸ್ತುವಲ್ಲ ಎಂಬುದನ್ನು ಅರಿತು ಅವರ ವೈಯಕ್ತಿಕ ಸ್ವಾತಂತ್ರ್ಯ, ಅಭಿಲಾಷೆಗಳಿಗೆ, ವ್ಯಕ್ತಿತ್ವದ ವಿಕಾಸಕ್ಕೆ ಆಸ್ಪದ ನೀಡಬೇಕು. ಉದ್ಯೋಗ ಕ್ಷೇತ್ರದಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಶೋಷಣೆಯನ್ನು ದಿನನಿತ್ಯ ಅನುಭವಿಸುವ ಅಸಂಖ್ಯಾತ ಮಹಿಳೆಯರ ಪಾಡು ಶೋಚನೀಯ. ಸಂಬಳ, ಬಡ್ತಿ, ಅಧಿಕಾರ ಎಲ್ಲದರಲ್ಲಿಯೂ ಮಹಿಳೆಗೆ ದ್ವಿತೀಯ ಸ್ಥಾನವನ್ನೇ ಕೊಡಲು ಬಯಸುತ್ತಾನೆ ಪುರುಷ. ನಾವು ನಾಗರಿಕತೆಯಲ್ಲಿ ಮುಂದುವರಿದಂತೆ ಮಾನವರಾಗಿ ಬಾಳುವುದು ಹೇಗೆಂಬುದನ್ನು ಕಲಿಯದಿದ್ದರೆ, ಮಾನವೀಯ ಮೌಲ್ಯಗಳನ್ನು ಬೆಳಸಿಕೊಳ್ಳದಿದ್ದರೆ, ನಾಗರಿಕತೆಯೇ ನಮಗೆ ನರಕಪ್ರಾಯವಾಗುತ್ತದೆ ಮತ್ತು ನಾವು ನಗರದ ನರಪಶುಗಳಾಗುತ್ತೇವೆ ಅಷ್ಟೆ. ◆